ಅ) ಪದವಿ ಪೂರ್ವ ಶಿಕ್ಷಣ ಮಂಡಳಿ ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯದವರು ನಡೆಸಿರುವ ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅವುಗಳ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು)

ಅ) 1991ನೇ ಮಾರ್ಚ್‌ನಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯು ನಡೆಸಿರುವ ಪರೀಕ್ಷೆಗಳಲ್ಲಿ ಭ್ರಷ್ಟಾಚಾರ ನಡೆದಿರುವ ಬಗ್ಗೆ ವರದಿಯು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇಂಜಿನಿಯರಿಂಗ್ ಪರೀಕ್ಷೆಯ ಅಂಕ ಪಟ್ಟಿ ತಿದ್ದಿರುವ ಕೆಲವು ಪ್ರಕರಣಗಳು. ಮಾತ್ರ ಬೆಳಕಿಗೆ ಬಂದಿವೆ.

ಆ) ಇಂಜಿನಿಯರಿಂಗ್ ಪರೀಕ್ಷೆಯ ಅಂಕಪಟ್ಟಿ ತಿದ್ದಿರುವ ಪ್ರಕರಣಗಳನ್ನು ಪೂರ್ವಬಾವಿ ತನಿಖೆ ನಡೆಸಿ ಸಿಒಡಿ ತನಿಖೆಗೆ ಒಳಪಡಿಸಲಾಗಿದೆ.

ಬೆಂಗಳೂರಿನಿಂದ ಚಾಮರಾಜನಗರಕ್ಕೆ ಎರಡು ಸುವಿಹಾರಿ ಬಸ್ಸುಗಳನ್ನು ಓಡಿಸುವುದು.

2372 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಿಂದ ಚಾಮರಾಜನಗರಕ್ಕೆ ಈಗ ಓಡಿಸುತ್ತಿರುವ ಎಲ್ಲಾ ಬಸ್ಸುಗಳ ಗಳಿಕೆ ಉತ್ತಮವಾಗಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಸರ್ಕಾರ ಚಾಮರಾಜನಗರಕ್ಕೆ ಮೈಸೂರು ಮಾರ್ಗವಾಗಿ ಹಾಗೂ ಕೊಳ್ಳೆಗಾಲ ಯಳಂದೂರು ಮಾರ್ಗವಾಗಿ 2 ಸುವಿಹಾರಿ ಬಸ್ಸುಗಳನ್ನು ಓಡಿಸುವ ಬಗ್ಗೆ ಪರಿಶೀಲಿಸುತ್ತಿದೆಯೇ?

ಇ) ಸರ್ಕಾರ ಕಳೆದ ವರ್ಷವೇ ಈ ಬಗ್ಗೆ ಭರವಸೆ ನೀಡಿದ್ದರೂ ಇದುವರೆವಿಗೂ ಕಾರ್ಯಗತ ಮಾಡದೇ ಇರಲು ಕಾರಣಗಳೇನು?

ಈ) ಸರ್ಕಾರ ಪ್ರಸಕ್ತ ವರ್ಷದಲ್ಲಿಯೇ 2 ಸುವಿಹಾರಿ ಬಸ್ಸುಗಳನ್ನು ಬೆಂಗಳೂರಿನಿಂದ ಚಾಮರಾಜನಗರಕ್ಕೆ ಓಡಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು)

ಅ) ಹೌದು.

ಆ) ಪರಿಶೀಲಿಸುವುದು.

ಇ) ಹೊಸ ಸುಖಾಸೀನ ವಾಹನಗಳು ಕಡಿಮೆ ಸರಬರಾಜುದುದರಿಂದ.

ಈ) ಈ ವರ್ಷದಲ್ಲಿ ಒಂದು ಸುಖಾಸೀನ ಸಾರಿಗೆಯನ್ನು ಪ್ರಾರಂಭಿಸಲಾಗುವುದು.

ಶಿಕ್ಷಣ ಮಾಧ್ಯಮದ ಬಗ್ಗೆ ನೇಮಿಸಿದ್ದ ಶಿಕ್ಷಣ ತಜ್ಞರ ಸಮಿತಿಯ ಶಿಫಾರಸುಗಳು

2184 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕ್ಷಣ ಮಾಧ್ಯಮದ ಬಗ್ಗೆ ನೇಮಿಸಿದ್ದ ಶಿಕ್ಷಣ ತಜ್ಞರ ಸಮಿತಿಯ ಶಿಫಾರಸುಗಳು ಸರ್ಕಾರಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಶಿಫಾರಸುಗಳ ಸಮಗ್ರ ವಿವರಗಳನ್ನು ಒದಗಿಸುವುದು?

ಇ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳು ಹಾಗೂ ಅದರ ನೀತಿ ಏನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯಯ ಸಚಿವರು)

ಅ) ಬಂದಿದೆ.

ಆ) ಅನುಬಂಧದಲ್ಲಿ ತೋರಿಸಲಾಗಿದೆ.

ಇ) ತಜ್ಞರ ಸಮಿತಿ ಮಾಡಿರುವ ಶಿಫಾರಸುಗಳ ಬಗ್ಗೆ ಸರ್ಕಾರ ಅಧ್ಯಯನ ನಡೆಸುತ್ತಿದೆ. ಶೀಘ್ರದಲ್ಲಿಯೇ ನೀತಿ ನಿರ್ಣಯ ನಿರ್ಧರಿಸಲಾಗುವುದು.

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿರುವ ಪೀಠಗಳು

2202 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಈಗ ಯಾವ ಯಾವ ಪೀಠಗಳಿವೆ, ವಿವರಗಳನ್ನೊದಗಿಸುವುದು?

ಆ) ಇಲ್ಲಿ ಉರ್ದು ಪೀಠ ಇದೆಯೇ?

ಇ) ಇಲ್ಲವಾದಲ್ಲಿ ಸ್ಥಾಪನೆಗಾಗಿ ಯೋಜಿಸಲಾಗುವುದೇ?

ಈ) ಈಗ ಖಾಲಿ ಇರುವ ಪೀಠಗಳಿಗೆ ಸರ್ಕಾರ ಹಣದ ನೆರವು ನೀಡಿರುವುದೇ?

ಉ) ನೀಡಿದ್ದಲ್ಲಿ ಯಾವ ಪೀಠಕ್ಕೆ ಎಷ್ಟೆಷ್ಟು ಧನ ಸಹಾಯ ನೀಡಲಾಗಿದೆ?

ಶ್ರೀ ಎಂ, ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು) :

ಅ) ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಈ ಕೆಳಕಂಡ ಪೀಠಗಳು ಇವೆ.

1) ಭಾರತೀಯ ಸ್ಟೇಟ್ ಬ್ಯಾಂಕಿನ ಗ್ರಾಮೀಣ ಅಭಿವೃದ್ಧಿ ಪೀಠ.

2) ಧರ್ಮ ನಿಧಿಯೋಗ ಪೀಠ.

3) ಎಂ.ವಿ. ಶಾಸ್ತ್ರಿ ಸ್ಮಾರಕ ಆಯುರ್ವೇದ ಮತ್ತು ಸಂಸ್ಕೃತ ಪೀಠ.

4) ಕೆನರಾ ಬ್ಯಾಂಕಿನ ಮೇನೇಜ್‌ಮೆಂಟ್ ಕೋರ್ಸಿನ ಪೀಠ.

5) ಸಿಂಡಿಕೇಟ್ ಬ್ಯಾಂಕಿನ ರೂರಲ್ ಬ್ಯಾಂಕಿಂಗ್ ಪೀಠ

6) ವಿಜಯಾ ಬ್ಯಾಂಕಿನ ಪರಿಸರ ಸಂರಕ್ಷಣ ಪೀಠ.

7) ಮಂಗಳೂರು ಡಯೊಸೆಸ್‌ನ ಕ್ರಿಶ್ಚಿಯಾನಿಟಿ ಪೀಠ.

8) ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ.

ಆ) ಇಲ್ಲ.

ಇ) ಈ ವಿಷಯದಲ್ಲಿ ವಿಶ್ವವಿದ್ಯಾನಿಲಯದಿಂದ ಪ್ರಸ್ತಾಪನೆ ಬಂದಿರುವುದಿಲ್ಲ.

ಈ) ಎಂ.ವಿ. ಶಾಸ್ತ್ರಿ ಸ್ಮಾರಕ ಆಯುರ್ವೇದ ಮತ್ತು ಸಂಸ್ಕೃತ ಪೀಠಕ್ಕೆ ಸರ್ಕಾರದಿಂದ 2 ಲಕ್ಷ ರೂಪಾಯಿಗಳು ಮತ್ತು ಮಂಜುನಾಥೇಶ್ವರ ತುಳು ಪೀಠಕ್ಕೆ ರೂ. 2.50 ಲಕ್ಷಗಳ ನೆರವು ನೀಡಿದೆ.

ರಾಜ್ಯದಲ್ಲಿ ಅಪೆಕ್ಸ್ ಬ್ಯಾಂಕಿನ ಶಾಖೆಗಳು

2195 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?